# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1846 (2210) |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾಗಿದ್ದ ದಿನಾಂಕ | : | 31-03-2020 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರು ನಗರದಲ್ಲಿ ನಿರ್ಮಾಣಗೊಂಡ ಸ್ಮಾರ್ಟ್ ಸಿಟಿ ಅನ್ವಯ ನಿಲ್ದಾಣಗಳಿಗೆ ತಗುಲಿದ ವೆಚ್ಚ ಎಷ್ಟು; ಟೆಂಡರ್ ಯಾರಿಗೆ ನೀಡಲಾಗಿದೆ; ಎಲ್ಲಾ ನಿಲ್ದಾಣಗಳನ್ನು ನಿರ್ಮಿಸಲಾಗಿದೆಯೇ (ವಿವರ ನೀಡುವುದು) | **ಕೆಯುಐಡಿಎಫ್‌ಸಿ ವತಿಯಿಂದ:**<br>ಮಂಗಳೂರು ಸ್ಮಾರ್ಟ್‌ಸಿಟಿ ಲಿಮಿಟೆಡ್ ವತಿಯಿಂದ ಒಟ್ಟು 20 ಬಸ್‌ನಿಲ್ದಾಣಗಳನ್ನು 2 ಹಂತಗಳಲ್ಲಿ (ಹಂತ-1 ರಲ್ಲಿ 6 ಹಾಗೂ ಹಂತ-2 ರಲ್ಲಿ 14) ನಿರ್ಮಿಸಲಾಗಿದ್ದು, ಇವುಗಳಿಗೆ ಒಟ್ಟು ವೆಚ್ಚ ರೂ.2,91,16,813/- ಆಗಿರುತ್ತದೆ.<br><br>ಹಂತ-1 ರ ಕಾಮಗಾರಿಗಳನ್ನು ಮೆ॥ ಇರ್ಯಾಮ್ ಸೈಂಟಿಫಿಕ್ ಸೊಲ್ಯೂಷನ್ ರವರಿಗೆ ಹಾಗೂ ಹಂತ-2 ರ ಕಾಮಗಾರಿಗಳನ್ನು ಮೆ॥ ಕಮಲ್ ಎನ್ ಫ್ಯಾಬ್ ರವರಿಗೆ ಟೆಂಡರ್ ಮೂಲಕ ನೀಡಲಾಗಿರುತ್ತದೆ.<br><br>ಹಂತ-1 ರಲ್ಲಿ ಒಟ್ಟು 22 ಬಸ್ಸು ತಂಗುದಾಣಗಳಿಗೆ ಟೆಂಡರ್ ಕರೆಯಲಾಗಿದ್ದು, ಕೇವಲ 6 ಬಸ್ಸು ತಂಗುದಾಣದ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಅವುಗಳ ವಿವರ ಈ ಕೆಳಕಂಡಂತಿದೆ:<br>1. ಎನ್.ಐ.ಟಿ.ಕೆ ಸುರತ್ಕಲ್<br>2. ವಿಷ್ಣುವಿಠೋಭ ಭಜನಾ ಮಂದಿರದ ಎದುರುಗಡೆ ಬೊಕ್ಕಪಟ್ಣ ಬೆಂಗ್ರೆ, ತಣ್ಣೀರುಬಾವಿ<br>3. ಸುರತ್ಕಲ್ (ಸ್ಮಶಾನದ ಹತ್ತಿರ)<br>4. ಮುಖ್ಯ ಜಂಕ್ಷನ್,ವಿಜಯ ಬ್ಯಾಂಕ್ ಎದುರುಗಡೆ, ಹೊಸಬೆಟ್ಟು<br>5. ಪಂಜಾಬ್ ನ್ಯಾಷನಲ್ ಬ್ಯಾಂಕ್ ಎದುರುಗಡೆ, ಹೊಸಬೆಟ್ಟು.<br>6. ಹೊನ್ನಕಟ್ಟೆ ಬಸ್ ಸ್ಟಾಪ್<br><br>ಹಂತ-2 ರಲ್ಲಿ ಒಟ್ಟು 24 ಬಸ್ಸು ತಂಗುದಾಣಗಳಿಗೆ ಟೆಂಡರ್ ಕರೆಯಲಾಗಿದ್ದು, ಕೇವಲ 14 ಬಸ್ಸು ತಂಗುದಾಣದ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಅವುಗಳ ವಿವರ ಈ ಕೆಳಕಂಡಂತಿದೆ:<br>1. ಶಕ್ತಿನಗರ, ಕನಡ್ಕ<br>2. ಸರ್ಕ್ಯೂಟ್ ಹೌಸ್, ಕದ್ರಿ ಹಿಲ್ಸ್<br>3. ದೇವಿನಗರ, ಪಚ್ಚನಾಡಿ<br>4. ಕೆಲರಾಯಿ ಸರ್ಕಲ್, ನೀರುಮಾರ್ಗ<br>5. ಅಂಬಿಕಾನಗರ, ಕಾವೂರು<br>6. ಮಹಾಲಿಂಗೇಶ್ವರ ದೇವಸ್ಥಾನ ಹತ್ತಿರ, ಕಾವೂರು<br>7. ಮುಲ್ಲಕಾಡು, ಕಾವೂರು |

| | | |
|---|---|---|
| | | 8. ಗುರ್ಜಿ ಸೆಂಟರ್, ಮಣ್ಣಗುಡ್ಡ<br>9. ಎನ್.ಎಮ್.ಪಿ.ಟಿ, NH 66<br>10. ಪದವು ಜಂಕ್ಷನ್, NH 66<br>11. ಆಶ್ರಯ ಕಾಲೋನಿ, ಪಚ್ಚನಾಡಿ<br>12. ರಾಯಿಕಟ್ಟೆ, ಕೂಳೂರು, ಕಾವೂರು ರಸ್ತೆ<br>13. ಸ್ಯೆಂಟ್ ಆಗ್ನೇಸ್.ಬೆಂದೂರ್<br>14. KIOCL ,NH 66<br><br>ಹಂತ-1 ಮತ್ತು ಹಂತ-2 ರ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. |
| ಆ) | ಮಂಗಳೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಮಾರುಕಟ್ಟೆಗಳು ಕಾರ್ಯನಿರ್ವಹಿಸುತ್ತಿದೆಯೇ. ಇಲ್ಲದಿದ್ದಲ್ಲಿ ಕಾರಣಗಳೇನು; (ವಿವರ ನೀಡುವುದು) | ಮಂಗಳೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 26 ಮಾರುಕಟ್ಟೆಗಳಿದ್ದು, ಈ ಪೈಕಿ 24 ಮಾರುಕಟ್ಟೆಗಳು ಕಾರ್ಯನಿರ್ವಹಿಸುತ್ತಿವೆ. ಕೇಂದ್ರ ಮೀನು ಮತ್ತು ತರಕಾರಿ ಮಾರುಕಟ್ಟೆಯ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿರುವ ಕಾರಣ ಸ್ಮಾರ್ಟ್ ಸಿಟಿ ಯೋಜನೆಯಡಿ ನವೀಕರಿಸುವ ನಿಟ್ಟಿನಲ್ಲಿ ವ್ಯಾಪಾರ ವಹಿವಾಟನ್ನು ಸ್ಥಗಿತಗೊಳಿಸಲಾಗಿದೆ. ಅಲ್ಲದೆ ಹಾಲಿ ವ್ಯಾಪಾರಿಗಳಿಗೆ ಈಗಾಗಲೇ ಪರ್ಯಾಯ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಈ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪೆಟಿಷನ್ 6725/2020 ಮತ್ತು ರಿಟ್ ಪೆಟಿಷನ್ 7015/2020 ರಂತೆ ದಾವೆಯು ಇತ್ಯರ್ಥಕ್ಕೆ ಬಾಕಿ ಇರುತ್ತದೆ. |
| ಇ) | ನಗರ ಪಾಲಿಕೆ ವ್ಯಾಪ್ತಿಯಲ್ಲಿ ಫುಟ್‌ಬಾಲ್ ಗ್ರೌಂಡ್‌ಗೆ 'ಟರ್ಫ್' ಅಳವಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಫುಟ್‌ಬಾಲ್ ಗ್ರೌಂಡ್‌ಗೆ 'ಟರ್ಫ್' ಅಳವಡಿಸಲು ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

ಸಂಖ್ಯೆ: ನಅಇ 168 ಸಿಎಸ್ಎಸ್ 2020

(ಬಿ.ಎ.ಬಸವರಾಜ)
ಮಾನ್ಯ ನಗರಾಭಿವೃದ್ಧಿ ಸಚಿವರು.